# ಆಧ್ಯಾತ್ಮಿಕತೆಯ ಹಿನ್ನೆಲೆಯಲ್ಲಿ ನಾಕುತಂತಿ ಕವನದ ವಿಶ್ಲೇಷಣೆ

**ವಾಣಿ ಡಿ.ಎಸ್.**

ಸಹಾಯಕ ಪ್ರಾಧ್ಯಾಪಕಿ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಸಿದ್ದಾಪುರ, ಕುಮಟಾ ರಸ್ತೆ, ಉತ್ತರ ಕನ್ನಡ.

DOI: https://doi.org/10.5281/zenodo.15581057

## ABSTRACT:

ದ.ರಾ. ಬೇಂದ್ರೆಯವರ 'ನಾಕುತಂತಿ' ಎಂಬ ಕಾವ್ಯವು ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡ ಸಾಹಿತ್ಯದ ಒಂದು ಮಹತ್ವಪೂರ್ಣ ಕಾವ್ಯವಾಗಿದೆ. ತಮ್ಮ ಭಾಷೆಯ ಮೂಲಕವೇ ಕೋಟ್ಯಂತರ ಸಾಹಿತ್ಯಾಸಕ್ತರನ್ನು ಹೊಂದಿದ್ದು ದ. ರಾ. ಬೇಂದ್ರೆ ನಿಜಕ್ಕೂ ಕನ್ನಡಕ್ಕೆ ದೇವರು ಕರುಣಿಸಿದ "ವರಕವಿ"ಯೇ ಸರಿ.

ಆದ್ಯಾತ್ಮ ನೆಲೆಯ ಒಂದು ನಿಗೂಢ ಕವನವಾಗಿದೆ. ಸಮಸ್ತ ವಿಶ್ವವನ್ನು ವೀಣೆಗೆ ಹೋಲಿಸಿ ಅದಕ್ಕಿರುವುದು ನಾನು, ನೀನು, ಆನು, ತಾನು ಎಂಬ ನಾಲ್ಕು ತಂತಿಗಳು ಇದು ನಾಲ್ಕುಭಾಗಗಳಲ್ಲಿ ವಿಂಗಡಿತವಾಗಿದ್ದು ಪ್ರತಿಯೊಂದು ಭಾಗವೂ ಆಧ್ಯಾತ್ಮಿಕ ಮತ್ತು ತಾತ್ವಿಕ ಅರ್ಥಗಳನ್ನು ಒಳಗೊಂಡಿದೆ. ಇವರ ಪ್ರಕಾರ ಸಮಸ್ತ ಸೃಷ್ಟಿಯೇ ಒಂದು ವಿರಾಟ್ ವೀಣೆ.

## KEYWORDS:

ವಿರಾಟ್ ವೀಣೆ, ಅಲೌಕಿಕ, ಪರಕಾಯ ಪ್ರವೇಶ, ಆತ್ಮ ಸಾಕ್ಷಾತ್ಕಾರ, ತಾತ್ವಿಕ ದೃಷ್ಟಿ, ಬ್ರಹ್ಮಜ್ಞಾನ, ಪರಾತ್ಪರ ಶಕ್ತಿ, ಸ್ಪೂರ್ತಿ ದೇವತೆ, ಸಾಕ್ಷೀಭೂತ.

'ನಾಕುತಂತಿ' ಎಂಬ ಕಾವ್ಯವು "ನಾನು", "ನೀನು", "ಆನು", ಮತ್ತು "ತಾನು" ಎಂಬ ನಾಲ್ಕು ತಂತಿಗಳನ್ನು ಆಧಾರವಾಗಿಟ್ಟುಕೊಂಡು ರಚಿಸಲಾಗಿದೆ. ಈ ತಂತಿಗಳು ವ್ಯಕ್ತಿಯ ಆತ್ಮಸಾಕ್ಷಾತ್ಕಾರದ ಹಾದಿಯಲ್ಲಿನ ಹಂತಗಳನ್ನು ಪ್ರತಿಬಿಂಬಿಸುತ್ತವೆ. ಮನುಷ್ಯನ ಗುರುತಿಸುವಿಕೆಯ ನಾಲ್ಕು ಹಂತಗಳಾಗಿವೆ.

ನಾಕುತಂತಿ ಅತ್ಯಂತ ಸರಳ ಕನ್ನಡದಲ್ಲಿ ರಚಿಸಲಾದ ಕವನ ಇಲ್ಲಿ ಪದಗಳಿಗೆ ಅನೇಕ ಅರ್ಥಗಳು ಇರುವಂತೆಯೇ ಪದಗಳ ನಾದಕ್ಕೂ ಸಹ ಅರ್ಥವಿದೆ. ಲೌಕಿಕ ಮತ್ತು ಅಲೌಕಿಕ ಆಯಾಮಗಳಲ್ಲಿ ಈ ಕವನದ ಅರ್ಥವನ್ನು ಅನುಭವಿಸಬೇಕಾಗುತ್ತದೆ. ಹಾಗೂ ತಿಳಿಯದ ಸಾವಿರಾರು ಅರ್ಥಗಳನ್ನು ತಮ್ಮ ಒಡಲೊಳಗೆ ಬಚ್ಚಿಟ್ಟುಕೊಂಡಿದೆ. ಅಂತರಾಳದಲ್ಲಿ ಹುದುಗಿಸಿಕೊಂಡಿರುತ್ತವೆ. ಕವನಗಳ ಪರಕಾಯ ಪ್ರವೇಶ ಅತ್ಯಗತ್ಯವಾಗಿದೆ.

ವಿಶ್ವವೆಂದರೆ ಏನು? ಮಾನವನ ಇರುವಿಕೆಯ ಮೂಲ ಕಾರಣವೇನು? ಕಾಣದ ಅತೀತ ಶಕ್ತಿ ಇರುವುದು ನಿಜವೇ? ಆಧ್ಯಾತ್ಮ ಏಕೆ ಬೇಕು? ಎಂಬ

ಪ್ರಶ್ನೆಗಳೊಂದಿಗೆ ಬೇಂದ್ರೆಯವರ ಪ್ರಕಾರ ಸಮಸ್ತ ಸೃಷ್ಟಿಯೇ ಒಂದು ವಿರಾಟ್ ವೀಣೆ. ಈ ನಾಲ್ಕು ತಂತಿಗಳು ನಾನು, ನೀನು, ಆನು, ತಾನುಗಳಾಗಿವೆ.

**ನಾನು:**

ಇದು ವ್ಯಕ್ತಿಯ ಅಹಂಕಾರ ಮತ್ತು ಸ್ವಾರ್ಥವನ್ನು ಸೂಚಿಸುತ್ತದೆ. ವೈಯಕ್ತಿಕ ಅಸ್ತಿತ್ವದ ಪ್ರಬಲ ಭಾವನೆ ಇಲ್ಲಿದೆ. ಅದು ಒಂದು ಭ್ರಮೆಯಲ್ಲಿ ನಾವಿರುವುದು. ಈ ಭ್ರಮೆಯನ್ನು ಹಲವು ಪ್ರಕಾರಗಳಲ್ಲಿ ತಿಳಿಸುತ್ತಾರೆ. ನಾನು ತಿಳಿದುಕೊಂಡಂತಹ ವ್ಯಕ್ತಿತ್ವ ನನ್ನದು ಇದನ್ನು ನಾನು ಎಂದು ವಿಶ್ಲೇಷಿಸಲಾಗಿದೆ. ನಾನು ಹೇಗಿದ್ದೇನೆ ಅಂತ ಒಂದು ಭ್ರಮೆಯಿದೆ. ಉದಾಹರಣೆ: ಚೆನ್ನಾಗಿರುವ ಪೋಟೋ ನನ್ನದು ಎಂಬ ಭ್ರಮೆ ಏಕೆಂದರೆ ನಾನು ಹಾಗೆ ಕಾಣಿಸ್ತೀನಿ ಅನ್ನೊ ಭ್ರಮೆಯಿದೆ. ನಾನು ಎಂಬ ಕಲ್ಪನೆ 'ನಾನು' ಭ್ರಮೆಯಿಂದ ಮಾಡಿಕೊಂಡಿರುವದು ಅಥವಾ ಮತ್ತೊಬ್ಬರು ಹೇಳಿದ್ದು ಹೀಗಿದ್ದೀಯಾ, ಹೀಗಿದ್ದೀನಿ ಅಂತ ಇದು ನಾನು ತಿಳಿದುಕೊಂಡಿರುವಂತ ವ್ಯಕ್ತಿತ್ವವಿದೆಯಲ್ಲ ನಾನು ಹೀಗಿದ್ದೀನಿ ಅಂತ ಅದು ನಾನು

ಈ ಪ್ರಪಂಚದಲ್ಲಿ ಯಾರೂ ಇಲ್ಲ ನಾನೊಬ್ಬನೆ ಇದ್ದೀನಿ ಅಂದರೆ ನಾನು ಎಂಬ ಪದ ಬರುವುದೇ ಇಲ್ಲ. ನಾನು ಎನ್ನಬೇಕಾದರೆ ಇನ್ನೊಬ್ಬನಿರಬೇಕು ಯಾರೂ ಇಲ್ಲದೆ ಹೋದರೆ 'ನಾನು'ಗೆ ಅರ್ಥವಿಲ್ಲ

'ನಾನು ಎಂಬ ಅಂಶವನ್ನು ಆಧ್ಯಾತ್ಮಿಕ ಮತ್ತ ತಾತ್ವಿಕ ನೆಲೆಗಟ್ಟಿನಲ್ಲಿ ಕಾಣಬಹುದು. ಆಧ್ಯಾತ್ಮಿಕ ನೆಲೆಯಲ್ಲಿ ನಾನು ಎಂಬುದು ಅಹಂ, ನಾನೇ ಶ್ರೇಷ್ಠ ಎಂಬ ಮನೋಭಾವ ಇದು ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಮಾರಕ.

ತಾತ್ವಿಕ ದೃಷ್ಟಿಯಲ್ಲಿ 'ನಾನು' ಎಂಬುದು 'ತನ್ನತೆ' ಅಥವಾ ತನ್ನ ಇರುವಿಕೆಗೆ ಮನುಷ್ಯ ಏನು ಬೇಕಾದರೂ ಮಾಡಬಲ್ಲ ತನಗೆ ತಾನೆ ಮುಖ್ಯನೆಂಬ ದೃಢ ಸಂಕಲ್ಪ ತನ್ನ ಇರುವಿಕೆ ಯನ್ನು ಇತರರಿಗೆ ತೋರ್ಪಡಿಸುವ ಅಚಲ ತುಡಿತ

**ನೀನು:**

ಇದು ಇತರರ ಪರಿಗಣನೆ ಮತ್ತು ಔದಾರ್ಯವನ್ನು ಪ್ರತಿನಿಧಿಸುತ್ತದೆ. ಇಲ್ಲಿ ವ್ಯಕ್ತಿಯು ತನ್ನ ಅಹಂಕಾರವನ್ನು ತ್ಯಜಿಸಿ ಇತರರೊಂದಿಗೆ ಸಂಬಂಧ ಬೆಳೆಸಲು ಆರಂಭಿಸುತ್ತಾನೆ. ನೀನು ಎಂದರೆ ಮತ್ತೊಬ್ಬನಲ್ಲ ನೀನು ಎಂದರೆ ನಾನು ನಾನಿಲ್ಲದೆ ನೀನಿಲ್ಲ, ನೀನಿಲ್ಲದೆ ನಾನಿಲ್ಲ

ನನ್ನ ವ್ಯಕ್ತಿತ್ವವನ್ನು ಮತ್ತೊಬ್ಬ ಹೇಗೆ ತಿಳಿದುಕೊಂಡಿದ್ದಾನೆ. "What am i

What Iam think am i is" ನಾನು ಏನು ಅಂತ, ಏನಿದ್ದೀನಿ ಅಂತ ನಾನು ತಿಳಿದು ಕೊಂಡಿದ್ದೀನೋ ಅದು ನಾನು. ನಾನು ಹೇಗಿದ್ದೀನಿ ಅಂತ ಮತ್ತೊಬ್ಬರು ತಿಳಿದುಕೊಂಡಿದ್ದಾರೋ ಅದು ನೀನು ನನ್ನ ಅಭಿಪ್ರಾಯವಲ್ಲ ಅದು ಮತ್ತೊಬ್ಬರ ಅಭಿಪ್ರಾಯ.

ಉದಾಹರಣೆ: ಬೇರೆಯವರು ನೀವು ಬಹಳ ಒಳ್ಳೆಯವರು, ಬುದ್ದಿವಂತರು ಇತ್ಯಾದಿ ಹೊಗಳುತ್ತಾರೆ. ಅದರ ನಿಜಾಂಶ ಅವರವರಿಗೆ ಗೊತ್ತಿರುತ್ತದೆ. ಹೊರಗಿನ ಜನ ಅಂದುಕೊಂಡಿರುವುದು ಹೀಗೆ ಅಥವಾ ನೀವು ಚೆನ್ನಾಗಿಲ್ಲ, ದಡ್ಡರು, ಅಂತ ಹೇಳಬಹುದು ಮತ್ತೊಬ್ಬರು ಭಾವಿಸಿದಂತಹ ವ್ಯಕ್ತಿತ್ವವಿದೆಯಲ್ಲ ಅದು ನೀನು ನೀನು ಎಂದರೆ ಮತ್ತೊಬ್ಬನಲ್ಲ ನಾನಿಲ್ಲದೆ ನೀನಿಲ್ಲ ನೀನಿಲ್ಲದೆ ನಾನಿಲ್ಲ.

**ಆನು:**

ಇದು ಅದ್ಭುತವಾದುದು. "ನಾನು" ಮತ್ತು "ನೀನು" ಎಂಬ ಎರಡು ತಂತಿಗಳ ಸಂಯೋಜನೆಯಿಂದ ಉಂಟಾಗುವ ಸಮನ್ವಯವನ್ನು ಸೂಚಿಸುತ್ತದೆ. ಇಲ್ಲಿ ವ್ಯಕ್ತಿಯು ಅಹಂಕಾರ ಮತ್ತು ಔದಾರ್ಯವನ್ನು ಸಮತೋಲನಗೊಳಿಸುತ್ತಾನೆ. ಇಲ್ಲಿ ನಾನು, ನಾನು ತಿಳಿದುಕೊಂಡಂತಹ ವ್ಯಕ್ತಿನೂ ಅಲ್ಲ ಮತ್ತೊಬ್ಬರೂ ತಿಳ್ಕೊಂಡ ವ್ಯಕ್ತಿನೂ ಅಲ್ಲ ನಾನೂ ಬೇರೇನೆ ಇದ್ದೇನೆ.

'ನಾನು' ಎನ್ನುವುದು ನಾನು ಮಾಡಿಕೊಂಡ ಭ್ರಮೆ, ನಾನೂ ಹೀಗೆ ಇದ್ದೇನೆ ಅಂತ.

'ನೀನು' ಮತ್ತೊಬ್ಬರು ನೀನು ಹೇಗಿದ್ದೀಯಾ ಅಂತ ಭ್ರಮೆಯನ್ನು ಸೃಷ್ಠಿ ಮಾಡಿದ್ದಾರೆ. ಅದು ನೀನು.

ನಾನು ಅದು ಅಲ್ಲ ಇದು ಅಲ್ಲ ಅತ್ಯಂತ ಚಿತ್ ಸ್ವರೂಪನಾದ ಆತ್ಮರೂಪನಾಗಿ ನಿಂತಿದ್ದೇನೆ.

ನನ್ನ ಭ್ರಮೆಗಳು, ಪರರ ಭ್ರಮೆಗಳು ಅಳಿದ ಮೇಲೆ ನೈಜವಾಗಿರುವಂತಹ ನನ್ನ ರೂಪವಿದೆಯಲ್ಲ ಅದನ್ನು ಸ್ವಯಂ ಎನ್ನುತ್ತಾರೆ. (Self) ಅದು ಆನು.

ಆನು ಎಂದರೆ ನನ್ನ ನಿಜರೂಪ. ನಾನು ತಿಳ್ಕೊಂಡ ಹಾಗೆ ಆಗಲಿ ಮತ್ತೊಬ್ಬರು ಅನ್ಕೊಂಡ ಹಾಗೆ ಆಗಲಿ ಅಲ್ಲ ಅದು ನಿಜರೂಪ.

**ತಾನು:**

ಇದು ಅಂತಿಮ ತಾತ್ವಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಅಂದರೆ ಆತ್ಮಸಾಕ್ಷಾತ್ಕಾರ ಅಥವಾ ಬ್ರಹ್ಮಜ್ಞಾನ. ಇಲ್ಲಿ ವ್ಯಕ್ತಿಯು ತನ್ನ ಅಸ್ತಿತ್ವವನ್ನು ಸಂಪೂರ್ಣ

ಅರಿತುಕೊಳ್ಳುತ್ತಾನೆ.

ಯಾವುದೋ ಮತ್ತೊಂದನ್ನು ಆನಿಸಿ ಹಿಡಿದುಕೊಂಡಿದೆಯೋ, ಆಧಾರವಾಗಿದೆಯೋ, ಸರ್ವತಂತ್ರ ಸ್ವತಂತ್ರವಾಗಿದೆಯೋ ಅದನ್ನ ಆತ್ಮತತ್ವ / ಬ್ರಹ್ಮತತ್ವ / Supreme ಆನು. ಈ ಆನು ತಾನುವನ್ನು ರಕ್ಷಣೆ ಮಾಡುತ್ತದೆ.

ತಾನು ಭಗವತ್ ಸೃಷ್ಟಿ, ಪರಾತ್ಪರ ಸೃಷ್ಟಿ ಇದು ಎಷ್ಟೊಂದು ಜೀವಗಳನ್ನು ರಕ್ಷಣೆ ಮಾಡುತ್ತಲ್ಲ ಅದು ಆನನ್ನು ಕೂಡ ರಕ್ಷಣೆ ಮಾಡುತ್ತೆ. ಆನು ಎಂದರೆ ನನ್ನ ನಿಜಸ್ವರೂಪ ನನ್ನ ನಿಜಸ್ವರೂಪವನ್ನೊಳಗೊಂಡಿರುವಂತದ್ದು ತಾನು. ವಿಶ್ವ ಸೃಷ್ಟಿಯ ಸಮಷ್ಟಿಯನ್ನೆಲ್ಲ ತನ್ನ ಸಾರ್ವಭೌಮ ಸಾಮ್ಯತೆಯಲ್ಲಿ ಹಿಡಿದಂತಹ"ತಾನು" ಮುಖ್ಯವಾದ ನಾಲ್ಕನೇ ತಂತಿ ಈ ನಾಲ್ಕನೇ ತಂತಿ ಬಹಳ ಮುಖ್ಯವಾದುದು.

ವಿಶ್ವವೆಂಬ ವಿರಾಟ್ ವೀಣೆಯ ನಾಲ್ಕನೇ ತಂತಿ "ತಾನು" ಎಂಬುದು ಪರಾತ್ಪರ ಶಕ್ತಿ. ಇದು ನಾನು, ನೀನು, ಆನುಗಳ ಉಗಮಸ್ಥಾನ. " ತಾನು " ಸೃಷ್ಟಿಕರ್ತ ಆತನಿಂದಲೇ ಸರ್ವಸ್ವವೂ.

ಈ ನಾಲ್ಕು ಒಂದೇ ಜೀವನದ ನಾಲ್ಕು ಮುಖಗಳು ನಮ್ಮ ಜೀವನದಲ್ಲಿ ಬ್ರಹ್ಮನಿಗೆ ನಾಲ್ಕು ಮುಖಗಳಿರುವ ಹಾಗೆ ನಾಲ್ಕು ಮುಖಗಳಿವೆ.

1. ನಾನು ಭ್ರಮಿಸಿದಂತಹ ಮುಖ
2. ಇನ್ನೊಬ್ಬರು ತಿಳಿದುಕೊಂಡಂತಹ ಮುಖ
3. ನಾನು ನಿಜವಾಗಿರುವ ಮುಖ
4. ಇದರ ಜೊತೆಗೆ ಭಗವಂತ ನನ್ನ ನಿರ್ದೇಶನ ಮಾಡುವಂತಹ ಮುಖ

ಕೆಲವರು ಸುಲಭವಾಗಿ ಹೀಗೆ ಹೇಳುತ್ತಾರೆ. ನಾನು–ತಂದೆ, ನೀನು–ತಾಯಿ, ಆನು–ಮಗು, ತಾನು–ಪರಮಾತ್ಮ ಎನ್ನುತ್ತಾರೆ.

ನು: ಎಂಬುದು ಸೆನ್ಸಿಬಾಲಿಟಿ, ಮನುಷ್ಯನ ಸಂವೇದನೆ

ನು: ನೋವು, ನೊಂಪಿ–ಪ್ರತಿಯೊಬ್ಬ ಮನುಷ್ಯನಿಗೂ ಒಂದು ನೋವಿದೆ. ಅದು ನು ಇದೆ. ನಾ+ ನು, ನೀ+ನು, ತಾ+ನು, ಆ+ನು, ನಾ, ನೀ, ಆ, ತಾ– ಎಂಬವುಗಳನ್ನು ಮಂತ್ರರೂಪದಲ್ಲಿ ಇಡೀಯಾಗಿ ಸಮರಸಗೊಳಿಸುವಂತ ಸೃಜನಾತ್ಮಕವಾದ ಪ್ರೇಮದ ಸಂಕೇತ ಶಬ್ದ.

ನು ಅನ್ನು – ಈ ನಾಲ್ಕರ ಜೊತೆ ಜೋಡಿಸಬೇಕು. ಹೀಗೆ ಜೋಡಿಸಿದಾಗ ನಾನು, ನೀನು, ಆನು, ತಾನು ಆಗುತ್ತದೆ. ನು ಎಲ್ಲಕ್ಕೂ ಸಾಮಾನ್ಯವಾಗಿದೆ. ಅಂದರೆ

ನೋವು ಎಲ್ಲ ಕಡೆ ಇರುವಂತದ್ದೆ, ಅದನ್ನ ನಾಲ್ಕರ ಜೊತೆ ಸೇರಿಸಿಕೊಳ್ಳಬೇಕು.

ನು-ಒಂದು ತಪ, ಒಂದು ನೋವು. ಅದ್ಭುತವಾದ ಚಿಂತನೆ. ಈ ನೋವು ಅನುಭವವಾಗುವಂತದ್ದು. ನೋವಿಲ್ಲದೆ ಅನುಭವವಿಲ್ಲ. ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಯಾವುದೇ ಅನುಭವವಾಗಬೇಕಾದರೂ ನೋವಿರುತ್ತೆ.

ನೋವೆಲ್ಲಿದೆ? ಉದಾಹರಣೆಗೆ – ಮೂರು ಗಂಟೆ ಸಿನಿಮಾ ನೋಡುವಾಗ ಕಣ್ಣಿಗೆ ನೋವಾಗಿರುತ್ತೆ. ನಿರಂತರವಾಗಿ ಕೆಲಸ ಮಾಡುವಾಗ ನೋವಾಗಿರುತ್ತೆ. ಆದರೆ ಅದು ಆವಾಗ ಗೊತ್ತಾಗಲ್ಲ.

ನು-(ನೋವು) ಈ ಪದವನ್ನು ನೂಲಬೇಕು.

ಉದಾಹರಣೆಗೆ-ಹತ್ತಿಯಿಂದ ನೂಲು ತೆಗೆಯುವಾಗ ಹತ್ತಿಯ ಗರ್ಭದಿಂದ ಎಳೆ ಬರುತ್ತಾ ಹೋಗುತ್ತದೆ. ಅದರೊಳಗೆ ದಾರವಿಲ್ಲ. ಅಲ್ಲಿ ಹತ್ತಿ ಇರುವುದು ಎಳೆದ ಹಾಗೆ ಒಂದು ದಾರ ಬಂದ ಹಾಗೆ ಹತ್ತಿಯ ಗರ್ಭದಿಂದ ಎಳೆ ಬರುತ್ತಾ ಹೋಗುತ್ತದೆ.

ಹಾಗೆ ನೂತಾಗ ನಾನು, ನೀನು, ಆನು, ತಾನು, ಎಂಬ ರೂಪವನ್ನು ನು ಪಡೆಯುತ್ತದೆ. ಈ ನೋವು ಎಂಬುದು ನಾಲ್ಕು ರೂಪಗಳನ್ನು ಪಡೆದುಕೊಳ್ಳುತ್ತದೆ. ಈ ನಾಲ್ಕು ರೂಪಗಳೇ ನಾಲ್ಕು ತಂತಿ

ನನ್ನ ನೋವು ಆ ಜೊತೆ ಸೇರಿದಾಗ ಆನು ತಾ ಜೊತೆ ಸೇರಿದಾಗ ತಾನು ನೀ ಜೊತೆ ಸೇರಿದಾಗ ನೀನು ನಾ ಜೊತೆ ಸೇರಿದಾಗ ನಾನು ಆಯಿತು.

**ಬೇಂದ್ರೇಯವರ ನಾಲ್ಕು ತಂತಿಗಳ ದರ್ಶನದ ಮೂಲ:**

1. ಸೋಯಾಬಾತ್ ಚತುಷ್ಪರ್ತಾ ಎಂಬ ಶೃತಿವಧೆಯಲ್ಲಿದೆ
2. ಅಲ್ಲಮಪ್ರಭುಗಳ ಈ ವಚನದಿಂದ್ ಪ್ರಭಾವಿತರಾಗಿರಬಹುದು.

**"ನಾನೊಂದು ಪ್ರಮಾಣು ನೀನೊಂದು ಪ್ರಮಾಣು**
**ಸ್ವಯಂ ಎಂಬುದು ಪ್ರಮಾಣು ಪರಂ ಎಂಬುದು ಪ್ರಮಾಣು**
**ಪ್ರಮಾಣು ಎಂಬುದು ಪ್ರಮಾಣು ಗುಹೇಶ್ವರನೆಂಬುದು ಮಾತ್ರ ಅಪ್ರಮಾಣು"**

ಇಲ್ಲಿ ಪ್ರಮಾಣು ಎಂದರೆ ಪ್ರೂ(ಸಾಬೀತು) ಮಾಡುವುದು ಎಲ್ಲವನ್ನು ಸಾಬೀತು ಪಡಿಸಬಹುದು ಆದರೆ ಗುಹೇಶ್ವರನನ್ನು ಮಾತ್ರ ಸಾಧ್ಯವಿಲ್ಲ.

ಬನ್ನಂಜೆ ಗೋವಿಂದಾಚಾರ್ಯರು "ನಾನ್ಯಾರು ಈಗ ನಾನ್ಯಾರು ಅಂತ ಎಂದರೆ ನಾನು ಎಂಬುದು ನನ್ನ ಕಲ್ಪನೆ, ನಾನು ಹೇಗಿದ್ದೀನಿ ಅಂತ ಒಂದು ಭ್ರಮೆಯಿದೆ ನಾನು ಹೀಗೆ ಇದ್ದೀನಿ ಅಂತ". ಎಂದು ಹೇಳುತ್ತಾರೆ.

ಉದಾಹರಣೆ: ನನ್ನ ಫೋಟೋ ನಾನು ನೋಡಿದಾಗ ಫೋಟೋ ಚೆನ್ನಾಗಿಲ್ಲ ಅಂತ ಹೇಳುವುದು. ಅಲ್ಲಿ ಕ್ಯಾಮೆರದ ತಪ್ಪಾ? ಎದುರಿಗಿರುವ ವಸ್ತು ಹೇಗಿರತ್ತೊ ಹಾಗೆ ಅದು ತೆಗೀಯುತ್ತೆ, ಏಕೆಂದರೆ ನಾನು ಅದರ ಹಾಗೆ ಕಾಣಿಸ್ತೀನಿ ಅಂತ ಭ್ರಮೆಯಿದೆ.

ಇಲ್ಲಿ ನಾನು ಎಂಬ ಕಲ್ಪನೆ ನಾನು ಭ್ರಮೆಯಿಂದ ಮಾಡಿಕೊಂಡಿರುವುದು. ಅಥವಾ ಮತ್ತೊಬ್ಬರು ಹೇಳಿದ್ದು. ಇದು ನಾನು ತಿಳಿದುಕೊಂಡಿರುವಂತಹ ವ್ಯಕ್ತಿತ್ವವಿದೆಯಲ್ಲ ನಾನು ಹೀಗಿದ್ದೀನಿ ಅಂತ ಅದು ನಾನು

**"ಆವು ಈವಿನ**
**ನಾವು ನೀವಿಗೆ**
**ಆನು ತಾನದ**
**ತನನನಾ$"**

ಆವು – ಗೋವು (ಹಸು) ಈವು – ಸೃಷ್ಟಿ ಮೊದಲ ದಂಪತಿಗಳಾದ ಆಡಂ ಮತ್ತು ಈವ್ ರ ಗರ್ಭದಲ್ಲಿ ಮೊಟ್ಟೆ ಮೊದಲು ನಿಂತು ನನ್ನಲ್ಲಿನ ನಾನು ಅಂತ ಹೇಳಿಕೊಂಡಂತಹ ತತ್ವವಿದೆಯಲ್ಲ ಅದು ಆವು ಈವಿನ ನಾನು ಸ್ವಯಂವಾಗಿರುವಂತಹ ನೀವಿನ ನೀನು ಹೇಳಿಕೊಳ್ಳುವಂತಹ ತತ್ವ ನೀನು. ಸ್ವಯಂ ಆಗಿರುವ ಆನು ಎಲ್ಲವನ್ನು ವ್ಯಾಪಿಸಿಕೊಂಡಿರುವಂತಹ ಈ ಪರತತ್ವ. ಈ ನಾಲ್ಕು ತಂತಿಗಳು ಆನುವನ್ನು ತನನನಾ –ಈ ನಾಲ್ಕು ಸ್ವಲ್ಪನೂ ಸುಮ್ಮನೆ ಇರಲ್ಲ ಒಂದೊಂದಾಗಿ ಸ್ವರವನ್ನು ಹೊರಡಿಸುತ್ತಾ ಇರ್ತಾವೆ. ನಮಗೆ ಗೊತ್ತಿಲ್ಲದ ಹಾಗೆ.

ನಾನು; ಯಾವತ್ತೂ ಎಂದಿಗೂ ನಿಲ್ಲಲ್ಲ. ಜೀವವಿರುವರೆಗೂ ನಾನು, ನಾನು, ನಾನು ಅಂತ ಒಳಗಡೆ ಗುಯ್ ಗುಡುತ್ತಾ ಇರುತ್ತೆ. ನೀನು ಎನ್ನುವುದು ಗುಂಗಿನಾದ ಹಿಡಿದಿದೆ.

ಆನು – ನಿಜವಾಗಿರುವುದು ಏನಪ್ಪ ಅದು Self ತಾನು ನಿರ್ದೇಶನ ಮಾಡತಕ್ಕ ಭಗವಂತನ ಶಕ್ತಿ.

ಎಲ್ಲವೂ ಶಾಂತವಾಗಿರಲ್ಲ ಒಂದಕ್ಕೊಂದು ಪೂರಕವಾಗಿ ಗುಂಗುಡ್ತಾ ಇರ್ತಾವೆ. ಅದನ್ನೆ ತನನನಾ ಅವು ಸ್ವರಮೇಳವನ್ನ ಧ್ವನಿಸ್ತಾ ಇರ್ತಾವೆ.

**"ನಾನು ನೀನಿನ**
**ಈ ನಿನಾನಿಗೆ**
**ಬೇನೆ ಏನೋ?**
**ಜಾಣಿ ನಾ$"**

ಅದರ ನಡುವೆ ಎಲ್ಲವೂ ಏಕಾಗ್ರವಾಗಿರಬೇಕು. ಈ ನಾಲ್ಕು ತಂತಿಗಳು

ಏನಂತಿವೆ ಒಬ್ಬನ ವ್ಯಕ್ತಿತ್ವದ ನಾಕು ಮುಖಗಳು ಅವು. ಒಂದಕ್ಕೊಂದು ಪೂರಕವಾಗಿದ್ದರೆ ಸುಶ್ರಾವ್ಯವಾದ ಸ್ವರ ಬರುತ್ತೆ. ವೀಣೇಗೆ ನಾಲ್ಕು ತಂತಿಕಟ್ಟಿಕೊಂಡು ಆ ನಾಲ್ಕು ತಂತಿಗಳು ಬೇರೆ ಬೇರೆ ಸ್ವರ ತಂದರೆ ಅಪಸ್ವರ ಅಲ್ಲವಾ ಹಾಗೆ ಕವಿಗೆ ಚಿಂತೆ ಆಗುತ್ತೆ.

ನಾನು ನೀನು ಇವುಗಳ ನಡುವೆ ಬೇಧ ಹೇಗೆ ಬಂತು ನಾನು ಅಂದರೆ ನಾನು ಹೇಗೀದ್ದೀನಿ ಅನ್ನೊ ನನ್ನ ಭ್ರಮೆ. ನೀನು ಎಂದರೆ ಜನ ತಿಳ್ಕೊಂಡ ಹಾಗೆ. ' What am i, What I am think, am i is, What people think about me' ಇವುಗಳ ನಡುವೆ ವ್ಯತ್ಯಾಸ ಇರಬಾರದು. ಮನಸ್ಸು ಮತ್ತು ಜೀವನ ಪಾರದರ್ಶಕವಾಗಿದ್ದಷ್ಟು ಒಳ್ಳೆಯದು, ನಾನೀರುವುದೇ ಒಂದು ತೋರಿಸಿಕೊಳ್ಳೊದೆ ಒಂದು ಹಾಗಾಗಿದೆ. ನಾನು ನೀನು ಇವುಗಳ ನಡುವೆ ನಾನಿನಾ, ಈನು ನಾನಿಗೆ – ಈ ವಿರಸ ಬೇನೆ ಏಕೆ ಬಂತು. ಏಕೆಂದರೆ ಮನಸ್ಸು ಜೀವನ ಪಾರದರ್ಶಕವಾಗಿಲ್ಲ ಈ ಬೇನೆ ಏಕೆ ಬಂತೊ ಗೊತ್ತಾಗಲಿಲ್ಲ.

**"ಚಾರು ತಂತ್ರಿಯ**
**ಚರಣ ಚರಣದ**
**ಘನಘನಿತ ಚತು**
**ರಸ್ವನಾ**
**ಹತವೊ ಹಿತವೊ**
**ಆ ಅನಾಹತಾ**
**ಮಿತಿನಿತಿಗೆ ಇತಿ**
**ನನನನಾ"**

ಈ ನಾಲ್ಕು ತಂತಿಯ ಮಿಡಿತವಿದೆಯಲ್ಲ ಇಲ್ಲಿ ಸ್ವಲ್ಪ ಆಶಾವಾದ ಬಂತು. ಜೀವನ ಸ್ವಲ್ಪ ಪರಿಶುದ್ಧವಾಯ್ತು, ನೋವು ನಿಧಾನವಾಗಿ ಸಂವೇಧನೆ ಆಯ್ತು, ಆ ಸಂವೇಧನೆ ನಿಧಾನವಾಗಿ ನಿವೇದನೆ ಆಗುತ್ತದೆ. ಕೊನೆಗೆ ನಿವೇದನೆಯಾಗಬೇಕು. ಹಾಗಾದಾಗ ನಾಲ್ಕು ತಂತಿಗಳು ಸಮ/ಸ್ವರವಾಗಿ ಬರ್ತಾ ಇದೆ. ಅಬ್ಬಾ! ಎಂದು ಸಂತೋಷವಾಗುತ್ತೆ. ಅಂತೂ ನನ್ನ ಜೀವನ ಒಂದು ಹಾದಿಗೆ ಬರ್ತಾ ಇದೆ ಅಂತ. ಆದರೂ ಒಂದು ಚಿಂತೆ ಬಂತು ಇದು ಶಾಶ್ವತವಾಗಿರುತ್ತೊ ಇಲ್ಲವೋ ಅಂತ ಈ ಬಂದಂತಹ ಸುಸ್ವರ ಏನಿದೆಯೋ ಹತವೋ–ಬೇಗ ನಾಶವಾಗಿ ಹೋಗುತ್ತೋ ಅಥವಾ ಹಿತವೋ–ಶಾಶ್ವತವಾಗಿ ಉಳಿಯುತ್ತೊ ಅಥವಾ ಅನಾಹತವೋ ಅಂದರೆ ಸಂತೋಷದ ಉನ್ನತ ಸ್ಥಿತಿಗೆ ತಲುಪುತ್ತದೋ ಇಲ್ಲಿ ಅನಾಹತದ ಧ್ವನಿ ಕೇಳಿಸಲ್ಲ ಅನುಭವಿಸಬೇಕು.

ಚಿಂತೆ ಮಾಡ್ತಾ ಇದ್ದ ಹಾಗೆ ಚಿಂತನೆಗೆ ಒಂದು ಮಿತಿ ಇದೆ. ಇದ್ಯಾವುದು ಗೊತ್ತಾಗಲ್ಲ. ಈ ಮಿತಿಗಳ ಅಳಿವು ತಿಳಿಬೇಕು. ಯಾವಾಗಲೂ ಮನುಷ್ಯ ಬೆಳೆಯಬೇಕಾದರೆ ತನ್ನ ಮಿತಿಗಳ ಪರಿಚಯವಿರಬೇಕಂತೆ ಹಾಗೆ ಕವಿಗೆ ತನ್ನ ಮಿತಿಗಳ ಪರಿಚಯ ಆಗುತ್ತಾ ಹೋಯಿತು.

**"ಬೆನ್ನಿನಾನಿಕೆ**
**ಜನನ ಜಾನಿಕೆ**
**ಮನಮನವೇ ಸಹಿ**
**ತಸ್ವನಾ"**

ಚಿಂತೆ ಬಂದ ನಂತರ ಇದರ ಹಿಂದೆ ಇರುವಂತಹದ್ದು ಏನು ಬೆನ್ನಿನ ಆನಿಕೆ, ಆಧಾರವಾಗಿರುವಂತದ್ದು ಅದು ಈಶ್ವರ ಪ್ರಜ್ಞೆ. ನಮ್ಮ ಮನಸ್ಸಿನಲ್ಲಿ ಚಿಂತೆ ದುಗುಡ ಬಂದಾಗಲೇ ಈಶ್ವರನ ದ್ಯಾನ ಬರುವುದು. ಭಗವಂತನ ಕುರಿತು ತನ್ನ ಅಸ್ಮಿತೆ (ಇರುವಿಕೆ) ಯ ಗುಟ್ಟು ತಿಳಿದು ಮನನ ಮಾಡಿದಾಗ ಮಾತ್ರ ಅರ್ಥವಾಗುತ್ತದೆ. ಇದನ್ನು ಮಾತನಾಡಿದರೆ ಅರ್ಥವಾಗಲ್ಲ ಮನನ ಮಾಡಬೇಕು ಮಾತಾಡಿದಷ್ಟು ಕೈಗೆ ಸಿಗದೆ ಜಾರಿ ಹೋಗುತ್ತೆ. ಮನನ ಮಾಡಿಕೊಳ್ಳಬೇಕು.

ಭಾರತೀಯ ಸಂಸ್ಕೃತಿಯಲ್ಲಿ ಮುಖ್ಯವಾಗಿ ಒಳಗಡೆ/ಆಂತರ್ಯವನ್ನು ಗಮನಿಸುವಂತದ್ದುಆದರೆ ಪಾಶ್ಚಿಮಾತ್ಯರಲ್ಲಿ ಹೊರಗಡೆ ನೋಡುವುದು. 'ಮನನವೇ ಸಾಹಿತ್ಯ, ಮನನವೇ ಸ್ಥಿತ್ಯ'

**"ಗೋವಿನ ಕೊಡುಗೆಯ**
**ಹಡಗದ ಹುಡುಗಿ**
**ಬೆಡೆಗಿಲೆ ಬಂದಳು**
**ನಡು ನಡುಗಿ;"**

ನಾವು, ನೀವು ಹೋಗಿ ಬೆಡಗಿನ ಹುಡುಗಿ ಬಂದಳು ಆನು ತಾನಾಗುವಂತಹ ಬೆಡಗು ಬಂತು ತನನನಾ ಹೋಗಿ ನಡು ನಡುಗಿ ಆಯ್ತು.

ಇದು ಯಾರ ಹುಡುಗಿ, ಆನು, ತಾನು ಹೋಗಿ ಹುಡುಗಿ ಎಲ್ಲಿ ಬಂದಳು. ಅಂದರೆ ಅದು ಸ್ಪೂರ್ತಿ ದೇವತೆ. ಸ್ಪೂರ್ತಿ ಬಂದಾಗ ಜೀವನ ದೃಷ್ಟಿ ಬದಲಾಗುತ್ತೆ. ಆ ಹುಡುಗಿ( ಸ್ಪೂರ್ತಿ) ಹೇಗಿದ್ದಾಳೆಂದರೆ.

**"ಸಲಿಗೆಯ ಸುಲಿಗೆಯ**
**ಬಯಕೆಯ ಒಲುಮೆ**
**ಬಯಲಿನ ನೇಯ್ಗೆಯ**
**ಸಿರಿಯಡುಗಿ'**
**ನಾಡಿಯ ನಡಿಗೆಯ**
**ನಲುವಿನ ನಾಲಿಗೆ**
**ನೆನೆದಿರೆ ಸೋಲುವ**
**ಸೊಲ್ಲಿನಲಿ"**

ಉದಾಹರಣೆ: ಹಾಡುವುದಕ್ಕಿಂತ ಮೊದಲು ಆ ಪಾತ್ರವನ್ನು ತುಂಬಿಕೊಳ್ಳಬೇಕು.

**"ಮುಟ್ಟದ ಮಾಟದ**
**ಹುಟ್ಟದ ಹುಟ್ಟಿಗೆ**

**ಜೇನಿನ ಥಳಿಮಳಿ**
**ಸನಿಹ ಹನಿ ;**
**ಬೆಚ್ಚಿದ ವೆಚ್ಚವು**
**ಬಸರಿನ ಮೊಳಕೆ**
**ಬಚ್ಚಿದಾವೆದೊ**
**ನಾ ತಿಳಿಯೆ**
**ಭೂತದ ಭಾವ**
**ಉದ್ಭವ ಜಾವ**
**ಮೊಲೆ ಊಡಿಸುವಳು**
**ಪ್ರತಿಭೆ ನವ''**

ಮುಟ್ಟದ ಮಾಟದ... ಹಾಡಿಲ್ಲ ಮೊದಲೇ ಅವರ ಮಾಟ ಮನಸ್ಸಲ್ಲಿ ತುಂಬಿಕೊಂಡಿದೆ. ಕವನ ರಚನೆಯಲ್ಲಿ ಕವನ ಹುಟ್ಟುವ ಮೊದಲು ಮನಸಿನಲ್ಲಿ ಆ ಚಿಂತೆ(ಚಿತ್ರ) ಬರುತ್ತೆ. ಅದರ ಬಗ್ಗೆ ಸ್ಫೂರ್ತಿ ಬಂದು ಬರೀ ಬೇಕು ಅಂತ ಕುಳಿತಾಗ ಆ ನಾಕು ತಂತಿ ರಸಮಯವಾಗಿ ಬರಬೇಕಾದರೆ

**'ಬೆಚ್ಚಿದ ವೆಚ್ಚವು ಬಸರಿನ ಮೊಳಕೆ ಬಚ್ಚಿದಾವುದೊ'**

ಒಂದು ಸಲ ಕವನ ಬರೆದು ಮುಗಿಸಿದ್ದೀರಿ ಅಂದರೆ ಸ್ಫೂರ್ತಿ ದೇವತೆ ಬಂದದಾಯಿತು. ಇದುವರೆಗೂ ಖರ್ಚಾದ ಶಕ್ತಿ ಕಾವ್ಯದ ಬಸಿರಿನ ಮೊಳಕೆ ಬಂದು ಬಿಟ್ಟಿದ್ದಾಗಿದೆ. ನಾ ತಿಳಿಯೆ ಹಾಗೆ ಕೊನೆಗೆ ಇನ್ನು ಸ್ಪಷ್ಟ ಮಾಡುತ್ತಾರೆ.

'ಭೂತದ ಭಾವ ಉದ್ಭವ ಜಾವ ಮೊಲೆ ಊಡಿಸುವಳು ಪ್ರತಿಭೆ ನವ'

ನಾನು ಏನನ್ನಾದರೂ ಬರೆಯಬೇಕಾದರೆ ಯಾವುದೇ ನದಿಯಲ್ಲಿ ಎರಡನೆ ಬಾರಿ ಕಾಲಿಡಲಾಗಲ್ಲ ಏಕೆಂದರೆ ಮುಂದಿನ ಹೆಜ್ಜೆ ಎತ್ತಿಡುವುದರಲ್ಲಿ ನೀರು ಹರಿದು ಹೋಗಿ ಬೇರೆ ನೀರು ಬಂದಿರುತ್ತೆ. ಹಾಗೆ ಭಾವ ಮನಸ್ಸಿನಲ್ಲಿ ಭಾವವಿದೆ. ಅದು ಭೂತದ್ದು ನಾನು ಏನೇ ಕವನ ಸಂಗೀತ ಹೇಳಿದರೂ ಸಹ ಹಿಂದೆ ಇರುವ ಭೂತದಂತಹ ಚಿಂತನೆಗಳನ್ನೆ ಬರೆಯೋದು ನಾನು. ನವ ಪ್ರತಿಭೆ ನನಗೆ ಹಾಲು ಕೊಟ್ಟು ಪ್ರಚೋಧನೆ ಮಾಡ್ತಾಳೆ.

**''ಚಿತ್ತೀ ಮಳೆ ತತ್ತೀ ಹಾಕತಿತ್ತು**
**ಸ್ವಾತಿ ಮುತ್ತಿನೊಳಗ**
**ಸತ್ತಿ$ಯೊ ಮಗನ$**
**ಅಂತ ಕೂಗಿದರು**
**ಸಾವೀ ಮಗಳು, ಭಾವೀ ಮಗಳು**
**ಕೂಡಿ''**

ಒಂದು ಸಾವು ಇನ್ನೊಂದು ಭಾವ ಸಾವು ಅಂದರೆ ಜೀವಕ್ಕೆ ಅಂತಲೇ ಅಲ್ಲ ನಮ್ಮ ಚಿಂತನೆಗೆ ಆಗಬಹುದು, ವಿಚಾರಕ್ಕೆ /ಸ್ಫೂರ್ತಿಗೆ ಅಗಬಹುದು. ಸಾವು ಮತ್ತು

ಭಾವ ಸಾಂಕೇತಿಕವಾಗಿ ಬರುವಂತದ್ದು.. ಅವರು ಕೂಗಿದರಂತೆ ಸತ್ತಿಯೋ ಮಗನ ಅಂತ ಸತ್ತು ಹೋಗ್ತೀಯಾ ನೀನು ಅಂತ ಸಾವು ಹೆದರಿಸ್ತು. ಯಾವಾಗ ಭಾವ ಬರೋದಿಲ್ವೊ ಆ ಚಿಂತನೆಗೆ ಸಾವು ಬಂದಾಗ ಭಾವ ಹೆದರಿಸ್ತದೆ. Possitive otti- tude ಇದೆ. ಚಿತ್ತೀ ಮಳೆ ಯಾವುದೀ ಒಂದು ಘಟನೆಯೊಳಗೆ ಆ ಚಿಪ್ಪಿನೊಳಗೆ ಒಂದು ಸ್ವಾತಿಯ ಮಳೆ ಆ ಚಿಪ್ಪಿನೊಳಗೆ ಹೋದಾಗ ಮುತ್ತಾಗಿ ಬಿಡುತ್ತದೆಯಂತೆ. ಆ ನೀರಿನ ಹನಿಗೆ ಸಾವಾಯ್ತು ಅದರಿಂದ ಹುಟ್ಟಿದ್ದು ಮುತ್ತು ಸತ್ತಿಯೋ ಮಗನೇ ಅಂದರೆ ಚಿಂತೆ ಬೇಡ ಸತ್ತರೆ ಮುತ್ತಾಗುವೆ. ನೀರು ಆವಿಯಾಗುವಂತದ್ದು, ಮುತ್ತು ಶಾಶ್ವತ ನೀರಾಗಿರುವ ಹನಿ ಮುತ್ತಾಗ್ತೀನಿ ಅಂತ ಭರವಸೆ ಕೊಡ್ತಾ ಇದೆ.

**"ಈ ಜಗ, ಅಪ್ಪಾ ಅಮ್ಮನ ಮಗ**
**ಅಪ್ಪನ ಕತ್ತಿಗೆ ಅಮ್ಮನ ನೊಗ**
**ಅಮ್ಮನೊಳಗ ಅಪ್ಪನ ಮೊಗ**
**ನಾ ಅವರ ಕಂದ**
**ಶ್ರೀ ಗುರುದತ್ತ ಅಂದ"**

ಭಾರತೀಯ ಸಂಸ್ಕೃತಿಯ ಮೂಲವಿಟ್ಟಿದ್ದಾರೆ. ಇಲ್ಲಿ ಪುರುಷ-ಪ್ರಕೃತಿ ಉಪನಿಷತ್ ನ ದ್ವಾಸಪರ್ಣದಲ್ಲಿ ಎರಡು ಹಕ್ಕಿ ಸಾಕ್ಷೀಭೂತವಾಗಿ ನೋಡ್ತಾ ಇದೆ. ಇನ್ನೊಂದು ಕೆಲಸ ಮಾಡ್ತಾ ಇದೆ. ಪುರುಷ-ಸಾಕ್ಷೀರೂಪ ಪುರುಷ(ತಂದೆ)+ ಪ್ರಕೃತಿ(ತಾಯಿ)= ಪ್ರಪಂಚ ಸೃಷ್ಟಿ.

ಪುರುಷ -ಶಾಂತ, ಸಾಕ್ಷಿ, ಪ್ರಕೃತಿ-ಕ್ರಿಯೆ. ಪ್ರಕೃತಿಯೊಳಗೆ ಪುರುಷ ತತ್ವವೂ ಸೇರಿದೆ. ಪ್ರಕೃತಿ ಸೃಷ್ಟಿ ಮಾಡಿದ ಮಾಯಾ ರೂಪದ ಪ್ರಪಂಚವನ್ನು ಈಡೀ ಪ್ರಪಂಚದಲ್ಲಿ ನಾಲ್ಕು ತಂತಿಗಳು ವಿವಿಧ ಸ್ತರಗಳಲ್ಲಿ ತನ್ನನ್ನು ಅರಸಿಕೊಂಡು ಹೋಗ್ತವೆ. ಇದನ್ನು ಹೊರಬೇಕಾದುದು ಪುರುಷ ಸಂಸ್ಕೃತಿ.

ಬಾಲಮುರುಳಿಕೃಷ್ಣರವರು: ನಾಲ್ಕು ತಂತಿಯಲ್ಲೇ ಎಲ್ಲ ಸ್ವರವನ್ನು ನುಡಿಸಬಹುದು ನಾವು ಆದರೆ ನಾಲ್ಕನೇ ತಂತಿ ಬಹಳ ಹುಷಾರಾಗಿರಬೇಕು. ಅದು ಬಹಳ ಮುಖ್ಯ. ಅದರಿಂದ ನಾಲ್ಕನೇ ತಂತಿಯನ್ನು ಹೆಣೆದಿರಿಸಿ ವಿಶ್ವವೀಣೆಯನ್ನು ನಿಲ್ಲಿಸಿ ಸೊಲ್ಲಿಸಿ ಅದರಿಂದ ಓಂಕಾರದ ಝೆಂಕಾರವನ್ನು ನುಡಿಸಬಲ್ಲಂತ ಮಹಿಮಾಯಕ ಗಣನಾಯಕನಾದ ತಾನು ಕೊನೆಗೆ ತನ್ನನ್ನು ಒಪ್ಪಿಸಿಕೊಳ್ಳಬೇಕು. ಇದು ಪ್ರಯತ್ನ ಮಾಡಬೇಕು. ವೈಖರಿಯಾಗಿ ಹರಿಯುವಂತಹ ವಾಕ್ ಇದೆಲ್ಲ ಹೀಗೆ ಸಾಗುತ್ತೆ. ಮೂಲದಲ್ಲಿ ಒಂದಾಗಿದ್ದಂತಹ ಪರತತ್ವ ನಾಲ್ಕು ಪ್ರಣಾಳಿಕೆಯಲ್ಲಿ ಪ್ರವಹಿಸಿ ನಾನು, ನೀನು, ಆನು, ತಾನು ನಾಲ್ಕು ತಂತಿಯಾಗಿ ನುಡಿದು ತಾನೇ ಸೃಷ್ಟಿಗೆ ತಂದೆಯಾಗಿ, ತಾಯಿಯಾಗಿ ಸರ್ವಋತುಗಳಲ್ಲಿ ಋತುವಾಗಿ, ನೇತಿಯಾಗಿ, ಪ್ರೀತಿಯಾಗಿ ಪ್ರಣವವಾಗಿ ಕವಿ ಮನೋರಂಗದಲ್ಲಿ ಅನುಭೂತಿಯಾಗಿ, ಅನುಭಾವವಾಗಿ

ಮೈದಳೆದುಕೊಳ್ಳುತ್ತೆ. ಇದು ತರ್ಕದಿಂದ ಸಾಧ್ಯವಿಲ್ಲ. ಅನುಭೂತಿಯಿಂದ ಮತ್ತು ಅನುಭಾವದಿಂದ ಮಾತ್ರ ಸಾಧ್ಯ. ಅಂತರ್ ಬೋಧೆಯಿಂದ ಮಾತ್ರ ಸಾಧ್ಯ.

ಯಾವಾಗ ನಾನು ನನ್ನ ಭ್ರಮೆಗಳೇನಿವೋ ನಾನು ಅನ್ನುವಂತದ್ದು. ಜನರು ಹುಟ್ಟಿಸಿದಂತಹ ಭ್ರಮೆ, ನನ್ನ ಸ್ವಂತರೂಪ, ಪರತತ್ವ–ಈ ನಾಲ್ಕು ಒಂದಕ್ಕೊಂದು ಸಂವಾದಿಯಾಗಿ ಬದುಕಿದರೆ ಜೀವನ ಸಾರ ಸರ್ವಸ್ವ ಪಡೆದುಕೊಳ್ಳುತ್ತೆ. ಸ್ವಲ್ಪ ಭಿನ್ನವಾದರೂ ಅಪಸ್ವರ ಬರುತ್ತೆ. ಅದರಿಂದ ಈ ನಾಲ್ಕು ತಂತಿಗಳು, ನಾಕೇ ನಾಕು ತಂತಿಗಳು ಏಕೀಭವಿಸಿ ಗುನುಗುನಿಸಿದಾಗ ತನನನಾ ಆದಾಗ ಅದ್ಭುತ ಆಧ್ಯಾತ್ಮಿಕ ಕಲ್ಪನೆಯಾಗುತ್ತದೆ.

ಬೇಂದ್ರೆಯವರ ರಚನೆ ಪ್ರಾಸಬದ್ಧವಾದುದು. ನಾಕುತಂತಿಯಲ್ಲಿ ಪ್ರಾಸದ ಸದ್ಬಳಕೆಯಾಗಿದೆ.

ಈ ಕವನದ ಮೂಲ ವಸ್ತುಗಳೆಂದರೆ ವಿಶ್ವವೀಣೆ. ಆದ್ಯಾತ್ಮ ಮತ್ತು ತತ್ವಶಾಸ್ತ್ರದಲ್ಲಿ ವಿಶ್ವವೆಂದರೆ ಸಕಲ ಜೀವಚರ, ಗ್ರಹಧಾತು ಮತ್ತು ಭೂಮ್ಯಾಕಾಶಗಳನ್ನೊಳಗೊಂಡ ಕೇಂದ್ರಬಿಂದು.

ಬೇಂದ್ರೆಯವರು ವಿಜ್ಞಾನ, ತತ್ವಶಾಸ್ತ್ರ, ವೇದಾಂತ, ಸಂಖ್ಯಾಶಾಸ್ತ್ರ ಮನಃಶಾಸ್ತ್ರ ಇತ್ಯಾದಿಗಳನ್ನು ಆಳವಾಗಿ ಅರಿತಿದ್ದರು. ತಮ್ಮ ಜೀವನದ ಕೊನೆಯ ಭಾಗದಲ್ಲಿ ರಚಿಸಿದ್ದ 'ನಾಕುತಂತಿ'ಅವರ ಆಧ್ಯಾತ್ಮ ದರ್ಶನದ ಉತ್ತುಂಗ ಸ್ಥಿತಿಯ ಪ್ರತಿಫಲನವಾಗಿದೆ. ಕವಿಯಿಂದ ಕಾವ್ಯಶ್ರೀಯ ಎತ್ತರಕ್ಕೆ ಏರಿದುದಕ್ಕೆ ಸಾಕ್ಷಿಯಾಗಿದೆ. ಇವರ ಅನೇಕ ಕವನಗಳು ಸಹೃದಯರ ಪೂರ್ಣ ಗ್ರಹಿಕೆಗೆ ಸಿಗುವುದಿಲ್ಲ ಎಂಬ ಆರೋಪವಿದೆ. ಈ ಕವನ ಇಹ ಪರಗಳೆರಡನ್ನು ಬೆಸೆಯುವಂತ ಅಂತರಾರ್ಥವಿದೆ. ಆಧ್ಯಾತ್ಮ ಚಿಂತನೆಯಲ್ಲಿ ಮಗ್ನನಾಗಿರುವಾತ ಆತ್ಮ ಚಿಂತನೆಯ ಒಳದನಿಗೆ ಕಿವಿಗೊಡುತ್ತಾ, ಲೋಕವ್ಯಾಪಾರದ ಹೊರನುಡಿಯನ್ನೂ ಕೇಳುತ್ತಾ ಇವೆರಡಕ್ಕೂ ಕಾರಣೀಭೂತವಾಗಿರತಕ್ಕಂತಹ ವಿಶ್ವವ್ಯಾಪಿ ಬ್ರಹ್ಮನನ್ನು ಅರಸುತ್ತಾ ಸಾಗುವ ಗತಿಯನ್ನು ಕಾವ್ಯ ಧ್ವನಿಸುತ್ತದೆ. ಈ ಕವನವೂ ತತ್ವಜ್ಞಾನ, ಜೀವನದ ಅರಿವು ಮತ್ತು ಮೋಕ್ಷದ ಅರ್ಥವನ್ನು ಸಾರುತ್ತದೆ. ನಮ್ಮ ಜೀವನದ ನಾಟಕವನ್ನು ತಂತಿಗಳೊಂದಿಗೆ ಆಡಿಸಲ್ಪಡುವ ಬೊಂಬೆಯಂತೆ ಕವಿ ಚಿತ್ರಿಸಿದ್ದಾರೆ. ಆದರೆ ಈ ತಂತಿಗಳನ್ನು ನಾವು ಅರಿವಿನಿಂದ ಬಳಸಬೇಕು.

## ಪರಾಮರ್ಶನ ಗ್ರಂಥಗಳು:

1. ಕೃಷ್ಣಪ್ಪ ಜಿ., (2000), ನಾಕುತಂತಿ ಒಂದು ಟಿಪ್ಪಣಿ, ಕಾಮಧೇನು ಪ್ರಕಾಶನ, ಹುಬ್ಬಳ್ಳಿ.
2. ಬೇಂದ್ರೆ ದ.ರಾ., (1964), ನಾಕುತಂತಿ, ಶ್ರೀ ಮಾತಾ ಪ್ರಕಾಶನ, ಹುಬ್ಬಳ್ಳಿ.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.